O.S. NO. 103/2018
DW - 3 .
Dated 07-03-2026.

ಸಾಕ್ಷಿಯನ್ನು ಈ ದಿನ ದಿನಾಂಕ 07-03-2026 ರಂದು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು .

ಪಾಟಿ ಸವಾಲುಃ ವಾದಿಯರ ಪರವಾಗಿ ಶ್ರೀ ಎಸ್ ಎಸ್ ವಕೀಲರಿಂದಃ

ನನ್ನ ಶಿಕ್ಷಣ ಬಿ.ಎ. ವರೆಗೆ ಆಗಿರುತ್ತದೆ. ನಾನು ಉದ್ಯೊಗ ಕೃಷಿ ಮಾಡುತ್ತೇನೆ. ಪ್ರಸ್ತುತ ದಾವೆ ಮಾಡುವ ಪೂರ್ವದಲ್ಲಿ ಬೇರೆ ಖರೀದಿ ವ್ಯವಹಾರ ಮಾಡಿದ್ದೀರಾ ಎಂದರೆ ಮಾಡಿರುತ್ತೇನೆ. 3 ಮತ್ತು 4 ನೇ ಪ್ರತಿವಾದಿಗಳು ದಾವಾ ಆಸ್ತಿ ಖರೀದಿ ತೆಗೆದಿರುವ ವಿಷಯ ನನಗೆ 2017 ರಲ್ಲಿ ಗೊತ್ತಾಯಿತು. ನಾನು ಖರೀದಿ ಪೂರ್ವದಲ್ಲಿ ದಾವಾ ಆಸ್ತಿ ರೆವಿನ್ಯೂ ದಾಖಲೆಗಳನ್ನು ಪರಿಶೀಲಿಸಿ ಸ್ಥಾನಿಕ ಚೌಕಾಶಿ ಮಾಡಿ ಖರೀದಿ ಮಾಡಿರುತ್ತೇನೆ. ದಾವಾ ಆಸ್ತಿಗಳನ್ನು ನಾನು ಪ್ರತ್ಯಕ್ಷವಾಗಿ ನೊಡಿ ನಾನು ದಾವಾ ಆಸ್ತಿ ಬೇಟಿ ಮಾಡಿದ ಸಮಯದಲ್ಲಿ 3 ಮತ್ತು 4 ನೇ ಪ್ರತಿವಾದಿಗಳು ಸ್ವಾಧಿನಾನುಬೊಗ ಮಾಡುತ್ತಿದ್ದರು. ನಾನು ಹೇಳುತ್ತಿರುವಂತೆ ನಾನು ದಾವಾ ಆಸ್ತಿಗೆ ಬೇಟಿ ನೀಡಿಲ್ಲ ಮತ್ತು 3 ಮತ್ತು 4 ನೇ ಪ್ರತಿವಾದಿಯರು ದಾವಾ ಆಸ್ತಿ ಸಾಗುವಳಿ ಮಾಡುತ್ತಿರಲಿಲ್ಲ ಎಂದರೆ ಸರಿಯಲ್ಲ. ದಾವಾ ಆಸ್ತಿಯ ಉತಾರದಲ್ಲಿ 3 ಮತ್ತು 4 ನೇ ಪ್ರತಿವಾದಿಯರ ಹೆಸರು ಮಾತ್ರ ಇದ್ದುದರಿಂದ ನಾನು ಖರೀದಿ ಮಾಡುವ ಕಾಲಕ್ಕೆ ವಾದಿಯರನ್ನು ವಿಚಾರಿಸಿರುವುದಿಲ್ಲ. ಸದರಿ ದಾವಾ ಆಸ್ತಿಯ ಖರೀದಿ ಕಾಲಕ್ಕೆ ಸದರಿ ಆಸ್ತಿಯ ಕಂದಾಯ ದಾಖಲಾತಿಗಳನ್ನು ವಕೀಲರ ಮುಂದೆ ಇಟ್ಟು ಅವರಿಂದ ಪರಿಶಿಲಿಸಿ ಅವರ ಅಬಿಪ್ರಾಯ ಪಡೆಯಲು ಯಾವುದೇ ತೊಂದರೆ

ಇರಲಿಲ್ಲ. ಖರೀದಿ ಪೂರ್ವದಲ್ಲಿ ನಾನು ಖರೀದಿ ಮಾಡಿದ ಆಸ್ತಿಯ ಬಗ್ಗೆ ಯಾವುದಾದರೂ ತಂಟೆ ತಕರಾರು ಇದ್ದರೇ ತಕರಾರು ಸಲ್ಲಿಸಬಹುದು ಅಂತಾ ಪೇಪರ ಜಾಹಿರಾತು ಹೊರಡಿಸಿಲ್ಲ. ಆ ರೀತಿ ಜಾಹಿರಾತು ಹೊರಡಿಸಲು ನನಗೆ ಯಾವುದೇ ತೊಂದರೆ ಇರಲಿಲ್ಲ. ನಾನು ದಾವಾ ಆಸ್ತಿಯ ಬಗ್ಗೆ ಸರಿಯಾಗಿ ಮಾಹಿತಿ ಪಡೆಯದೇ ಪ್ರತಿವಾದಿಗಳು ಹೇಳಿಕೆ ಮೇರೆಗೆ ಮಾತ್ರ ಖರೀದಿ ಮಾಡಿರುತ್ತೇನೆ ಎಂದರೆ ಸರಿಯಲ್ಲ. ಪ್ರತಿವಾದಿಯರಿಗೆ ಹಿಸ್ಸೆಯಲ್ಲಿ ಎಷ್ಟು ಆಸ್ತಿ ಇತ್ತು ಮತ್ತು ಮೊದಲು ಅವರು ಎಷ್ಟು ಮಾರಾಟ ಮಾಡಿದ್ದಾರೆ ಎಂದು ನಾನು ತಿಳಿದುಕೊಂಡಿಲ್ಲ. ಸಾಕ್ಷಿ ಮುಂದುವರೆದು 3 ಮತ್ತು 4 ನೇ ಪ್ರತಿವಾದಿಗಳ ಹಿಸ್ಸೆ ಕುರಿತು ವಿಚಾರಣೆ ಮಾಡಿ ಖರೀದಿ ಮಾಡಿರುತ್ತೇನೆ ಎಂದು ಸ್ವತ ನುಡಿದಿರುತ್ತಾರೆ. ವಾದಿಯರದು ಮತ್ತು ಪ್ರತಿವಾದಿಯರದ್ದು ಎಷ್ಟು ಹಿಸ್ಸಾ ಹಕ್ಕು ಇದೆ ಎಂದು ನಾನು ತಿಳಿದುಕೊಂಡಿದ್ದರೆ ನಾನು ಖರೀದಿ ಮಾಡಿದ ಸಂಪೂರ್ಣ ಆಸ್ತಿ ಖರೀದಿ ಮಾಡುವ ಪ್ರಮೆಯ ಉಂಟಾಗುತ್ತಿರಲಿಲ್ಲ ಎಂದರೆ ಸರಿಯಲ್ಲ. ಪ್ರಸ್ತುತ ದಾವೆ ಸಲ್ಲಿಸಿದ ನಂತರ 3 ಮತ್ತು 4 ನೇ ಪ್ರತಿವಾದಿಗಳಿಗೆ 1 ಎಕರೆ 8 ಗುಂಟೆ ಮಾತ್ರ ಹಿಸ್ಸೆ ಹಕ್ಕು ಇದ್ದ ವಿಷಯ ನನಗೆ ಗೊತ್ತಾಗಿ ವಾದಿಯರಿಗೆ ತೊಂದರೆ ಕೊಡಲು ಸುಳ್ಳು ಲಿಖಿತ ಹೇಳಿಕೆ ಸಲ್ಲಿಸಿ ಸುಳ್ಳು ತಕರಾರು ಮಾಡುತ್ತಿದ್ದೇನೆ ಎಂದರೆ ಸರಿಯಲ್ಲ. 1984 ರ ವಾಟ್ನಿ ಬಗ್ಗೆ ನನಗೆ ಡೈರಿ ನೊಡಿ ಗೊತ್ತಿರುತ್ತದೆ. ಸದರಿ ವಾಟ್ನಿ ತಹಶೀಲ್ದಾರ ಕಚೇರಿಯಲ್ಲಿ ಹಾಜರಾಗಿ ವಾಟ್ನಿ ಪತ್ರ ಮಾಡಿಕೊಂಡ ವಾಟ್ನಿ ಮೂಲಕ ವಾಟ್ನಿ ಆಗಿರುತ್ತದೆ. ನಾನು ಹೇಳುತ್ತಿರುವ ಸದರಿ ವಾಟ್ನಿ ಪತ್ರ ನಾನು ನೊಡಿರುತ್ತೇನೆ. ಅದನ್ನು ನ್ಯಾಯಾಲಯದಲ್ಲಿ ಹಾಜರು ಪಡಿಸಲು ನನಗೆ

O.S. NO. 103/2018
DW - 3 .
Dated 07-03-2026.

ಯಾವುದೇ ತೊಂದರೆ ಇರುವುದಿಲ್ಲ. ನಾನು ಹೇಳುತ್ತಿರುವಂತೆ ಯಾವುದೇ ಲಿಖಿತ ವಾಟ್ನಿ ಪತ್ರ ಆಗಿಲ್ಲ , ವಾಟ್ನಿ ಪತ್ರ ಆಗಿದೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು 1984 ರಲ್ಲಿ ವಾಟ್ನಿ ಆಗಿದೆ ಎಂದು ಪ್ರತಿವಾದಿಗಳಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಪ್ರತಿವಾದಿಗಳ ಹಿಸ್ಸೆಗಿಂತ ಹೆಚ್ಚು ಆಸ್ತಿ ಖರೀದಿ ಮಾಡಿ ಆಸ್ತಿಯ ಸರ್ವೆ ಮಾಡಲು ನಾನು ಬಂದಾಗ ವಾದಿಯರು ಪ್ರಸ್ತುತ ದಾವೆ ಸಲ್ಲಿಸಿರುತ್ತಾರೆ ಎಂದರೆ ಸರಿಯಲ್ಲ. ನನಗೆ ಪ್ರತಿವಾದಿಗಳ ಹಿಸ್ಸೆ 1 ಎಕರೆ 8 ಗುಂಟೆಗೆ ಮಾತ್ರ ಖರೀದಿದಾರನಾಗಿ ಹಕ್ಕುದಾರ ಇರುತ್ತೇನೆ ಎಂದರೆ ಸರಿಯಲ್ಲ. ಪ್ರತಿವಾದಿಗಳಿಗೆ ಸಹಾಯ ಮಾಡಲು ವಾದಿಯರಿಗೆ ತೊಂದರೆ ಕೊಡಲು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಮರುವಿಚಾರಣೆ - ಇಲ್ಲ.

(ಸಾಕ್ಷಿ ವಿಚಾರಣೆಯನ್ನು ನೆರವೇರಿಸಿದ್ದು , ಸಾಕ್ಷಿ ಹೇಳಿದ ಹೇಳಿಕೆಯನ್ನು ಬೆರಳಚ್ಚುಗಾರರಿಗೆ ಉಕ್ತ ಲೇಖನ ನೀಡಿ , ಅದನ್ನು ಗಣಕಿಕೃತಗೊಳಿಸಿದ ಮೇರೆಗೆ ದಾಖಲಿಸಲಾಯಿತು ).

ಓ ಹೇ ಕೇ ಸರಿ ಇದೆ.

ಹಿರಿಯ ದಿವಾಣಿ ನ್ಯಾಯಾಧೀಶರು
ಬೈಲಹೊಂಗಲ.